ಅಧ್ಯಕ್ಷರು :— ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರು .— ಮಾನ್ಯ ಸದಸ್ಯರಾದ ಶ್ರೀ ಉಗ್ರನರಸಿಂಹಪ್ಪನವರು ನಿಯಮ 190ರ ಪ್ರಕಾರ ಹಕ್ಕುಚ್ಯುತಿ ಬಗ್ಗೆ ಒಂದು ನೋಟೀಸ್ ಕೊಟ್ಟಿದ್ದಾರೆ. ಅದರೆ ಇದೇ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸದರಿ ವಿಷಯದ ಬಗ್ಗೆ ನ್ಯಾಯಾಂಗ ತನಿಖೆ ಮಾಡುವುದಾಗಿ ಹೇಳಿದ್ದಾರೆ. ಜೊತೆಗೆ ಇದೇ ವಿಷಯ ಮೇಲೆ ಅಲ್ಪಾವಧಿ ಸೂಚನೆಯ ಮೇಲೆ ಚರ್ಚೆ ಕೂಡ ನಡೆದಿದೆ. ಅದಕ್ಕೂ ಸಹ ಸರ್ಕಾರದವರು ಉತ್ತರವನ್ನು ನೀಡಿದ್ದಾರೆ. ಒಟ್ಟಿನಲ್ಲಿ ಈಗಾಗಲೇ ಇದರ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಇದಕ್ಕೆಲ್ಲಾ ಸರ್ಕಾರ ಉತ್ತರ ನೀಡಿ, ವಿಷಯವನ್ನು ನ್ಯಾಯಾಂಗ ತನಿಖೆಗೆ ತೆಗೆದುಕೊಂಡಿರುವುದರಿಂದ ಈ ಸೂಚನೆಯನ್ನು ನಿರಾಕರಿಸಲಾಗಿದೆ.

3. ಮನವಿಗಳು/ವಿಷಯ

ವಿಷಯ : i) ಶ್ರೀ ಉಗ್ರನರಸಿಂಹಪ್ಪನ ಕೇಸ್ ಬಗ್ಗೆ.

ಶ್ರೀ ಉಗ್ರನರಸಿಂಹಪ್ಪ . ನಾನು 25ನೇ ತಾರಿಖು.....

ಅಧ್ಯಕ್ಷರು . ತಾವು ಪ್ರಿವಿಲೇಜ್ ಮೋಷನ್ ಬಗ್ಗೆ ಸೂಚನೆಯನ್ನು ನೀಡಿದ್ದೀರಿ.....

ಶ್ರೀ ಉಗ್ರನರಸಿಂಹಪ್ಪ .— ನನ್ನ ಮತ್ತು ನಮ್ಮ ಸಂಸಾರದ ವಿಷಯದಲ್ಲಿ ಚರ್ಚೆಯಾಗ ತಕ್ಕ ಸಂದರ್ಭದಲ್ಲಿ ನಾನು ಮಾತನಾಡಲಿಕ್ಕೆ ಶುರುಮಾಡಿದಾಗ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿಕ್ಕೆ ಎಮ್ಮನಿಂತಿದ್ದಾರೆಂದು ನನಗೆ ಮಾತನಾಡಲಿಕ್ಕೆ ತಾವು ಅವಕಾಶ ಕೊಡಲಿಲ್ಲ: ಆಗ ನನ್ನ ಹಕ್ಕಿಗೆ ಚ್ಯುತಿಯಾಗಿದೆ. ನನ್ನ ಶ್ರೀಮತಿಯವರ ಕಡೆಯಿಂದ ಕಂಪ್ಲೈಂಟ್ ಬರೆಸಿಕೊಂಡು ಅಫಿಡವಿಟ್‌ಗೆ ಸಹಿ ಮಾಡಿಸಿಕೊಂಡಿದ್ದಾರೆ. ಈಗ ಅದರ ಬಗ್ಗೆ ನ್ಯಾಯಾಂಗ ತನಿಖೆ ಮಾಡುತ್ತಿದ್ದಾರೆ ಇದನ್ನು ಯಾವ ಯಾವ ಕ್ರಮದಲ್ಲಿ ತನಿಖೆ ಮಾಡುತ್ತಾರೆ ? ನಾನು ಪಂಕ್ಷಾಂತರ ಮಾಡಿದ್ದೇನೆಂದು ಹೇಳುತ್ತಿರುವಾಗ....

ಅಧ್ಯಕ್ಷರು . — ಅದು ಪ್ರಿವಿಲೇಜ್ ಆಗುವುದಿಲ್ಲ.

ಶ್ರೀ ಉಗ್ರನರಸಿಂಹಪ್ಪ .—ಗಂಭೀರವಾದ ವಿಷಯದ ಬಗ್ಗೆ ಸದನದಲ್ಲಿ ಸದಸ್ಯರು ಮಾತನಾಡಲಿಕ್ಕೆ ಹಕ್ಕು ಇಲ್ಲವೆಂದರೆ, ಸದನದಲ್ಲಿ ಹಕ್ಕು ಚ್ಯುತಿಯಾದಂತೆ ಆಗುವುದಿಲ್ಲವೆ ? ವಿಷಯ ನನ್ನ ಪರ್ಸನಲ್, ನನ್ನ ಶ್ರೀಮತಿಯವರ ವಿಚಾರ.

ಅಧ್ಯಕ್ಷರು .— ನಿಮ್ಮ ಪರ್ಸನಲ್ ವಿಚಾರ ಇದ್ದರೆ ಬೇರೆ ಸೂಚನೆ ಕೊಡಿ.

ಶ್ರೀ ಉಗ್ರನರಸಿಂಹಪ್ಪ.—ನನ್ನ ಮತ್ತು ನನ್ನ ಶ್ರೀಮತಿಯವರ ಬಗ್ಗೆ ದಿನಪತ್ರಿಕೆಗಳಲ್ಲಿ ವಿಚಾರ ಬಂದಿದೆ. ನಾನು ಪಕ್ಷಾಂತರ ಮಾಡಿರುವುದು ಕೂಡ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಅದು ಎಲ್ಲರಿಗೂ ಗೊತ್ತಿದೆ. ಏನೂ ಗೊತ್ತಿಲ್ಲದ, ಅವಿದ್ಯಾವಂತೆಯಾದ ಮುಗ್ಧ ಹೆಂಗಸನ್ನು ಕರೆದುಕೊಂಡು ಬಂದು ಪಕ್ಷಾಂತರ ಮಾಡಿದ್ದಾರೆಂದು ಹೇಳಿಕೆಯನ್ನು ಕೊಡಿಸಿದ್ದಾರೆ. ನಮಗೆ ಅವಮಾನ ಮಾಡಿದ್ದಾರೆ. ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ನನಗೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು .— ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಪಕ್ಷಾಂತರದ ಬಗ್ಗೆ ತಾವು ಜಾಸ್ತಿ ಮಾತನಾಡಿ. ತಾವು ಕಳುಹಿಸಿರತಕ್ಕ ಸೂಚನೆ ಪ್ರಿವಿಲೇಜ್ ಆಗುವುದಿಲ್ಲ. ತವ ಗೆ ಬೇರೆ ಅವಕಾಶ ವಿದೆ ಆಗ ಮಾತನಾಡಿ. ಪರ್ಸನಲ್ ವಿಷಯದ ಬಗ್ಗೆ ಬೇರೆ ಸೂಚನೆ ಕೊಟ್ಟು ಮಾತನಾಡಿ.

ಶ್ರೀ ಜೆ. ಡಿ. ಸೋಮಪ್ಪ.—ಅವರ ವಿಷಯ ಬಂದಾಗ ಅವರು ಮಾತನಾಡುವುದಕ್ಕೆ ಅವಕಾ ಕೊಡಬೇಕಾಗಿತ್ತು. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡದೆ ಇರುವುದರಿಂದ ಸದನದ ಸದಸ್ಯರಿಗೆ ಮಾತನಾಡುವ ಹಕ್ಕು ಇಲ್ಲವೆ ಎಂದು ಅವರು ಕೇಳುತ್ತಿದ್ದಾರೆ.

ಅಧ್ಯಕ್ಷರು .— ಅವರನ್ನು ನಿಗ್ರಹಿಸುವುದಕ್ಕೆ ಸಕಾರಣವಿಲ್ಲ.

ಶ್ರೀ ಉಗ್ರನರಸಿಂಹಪ್ಪ.—ನಾನು ಸದನದ ಸದಸ್ಯ, ನಾನು ನನ್ನ ಪರ್ಸನಲ್ ವಿಷಯದ ಬಗ್ಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು . ಶಾಸನಬದ್ಧವಾಗಿ ವಿವರಣೆ ಕೊಡುವುದಕ್ಕೆ ಅವಕಾಶವಿದೆ. ಒಂದು ಸಾರಿ ಸೂಚನೆ ಕೊಟ್ಟಿದ್ದೀರಿ, ಇನ್ನೊಂದು ಸಾರಿ ಸೂಚನೆ ಕೊಡುವುದಾದರೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ .— ನಾನು ಒಂದು ಗಮನ ಸೆಳೆಯುವ ಸೂಚನೆಯ ಬಗ್ಗೆ ಒಂದು ನೋಟೀಸ್ ಕೊಟ್ಟು 12ದಿವಸ ಆಯಿತು.

ಅಧ್ಯಕ್ಷರು .— ಅದನ್ನು ನೋಡುತ್ತೇನೆ.

(ii) ರೈತರ ಚಳವಳಿ ಕುರಿತು ಮುಖ್ಯಮಂತ್ರಿಯವರು ಮಾಡಿದ ಹೇಳಿಕೆ ಬಗ್ಗೆ ಹಕ್ಕು ಬಾಧ್ಯತೆ ಪ್ರಸ್ತಾಪ

ಶ್ರೀ ಗೋವಿಂದ ಪಿ. ಒಡೆಯರಾಜ್ .— ನಿಯಮ 190–191ರ ಪ್ರಕಾರ ಪ್ರಿವಿಲೇಜ್ ಮೋಷನ್ನನ್ನು ಮುಖ್ಯಮಂತ್ರಿಗಳು ಕೊಟ್ಟಂತ ಹೇಳಿಕೆಯ ಮೇಲೆ ನಾನು ಏತಕ್ಕೆ ತರಬಾರದು ? ನಿನ್ನೆ